# ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ನಿಯಮಿತ

# Safe Star Souharda Sahakari Niyamita

ರ.ನಂ. ಕ್ರ.ಸಂ. ಡಿ.ಆರ್.ಎಸ್ / ಆರ್.ಎಸ್.ಆರ್ / 2245 / ಸೌಸ / 11–12

## 2018–19ನೇ ಸಾಲಿಗೆ ರೂ1.15ಕೋಟಿ ಲಾಭ ಹಾಗೂ ಶೇ11 ಡಿವಿಡೆಂಡ್ ಘೋಷಣೆ –ಜಿ. ಜಿ. ಶಂಕರ

ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ನಿ., ಹೊನ್ನಾವರ 2018–19ನೇ ಸಾಲಿನಲ್ಲಿ ರೂ1.15ಕೋಟಿ ಲಾಭ ಗಳಿಸಿದ್ದು ಶೇ11 ಡಿವಿಡೆಂಡ್ ಘೋಷಣೆ ಮಾಡಲಾಗಿದೆ ಎಂದು ಅಧ್ಯಕ್ಷ ಶ್ರೀ ಜಿ. ಜಿ. ಶಂಕರ ತಿಳಿಸಿದರು. ಅವರು ಇತ್ತೀಚೆಗೆ ನಡೆದ ಸಹಕಾರಿಯ 2018–19ನೇ ಸಾಲಿನ ವಾರ್ಷಿಕ ಸರ್ವ ಸಾಧಾರಣ ಸಭೆ ಉದ್ಘಾಟಿಸಿ ಮಾತನಾಡಿದರು. ಶೇರುದಾರರು ಹಾಗೂ ಸಿಬ್ಬಂದಿಗಳು ಒಂದು ನಾಣ್ಯದ ಎರಡು ಮುಖವಿದ್ದಂತೆ, ಅವರುಗಳ ಜುಗಲ್‌ಬಂದಿಯಿಂದಲೇ ಸಹಕಾರಿ ನಡೆಯುತ್ತದೆ. ಇದಕ್ಕೆ ಆಡಳಿತ ಮಂಡಳಿ, ಬಿಡಿಸಿ ಹಾಗೂ ಫೀಲ್ಡ್ ಎಕ್ಸಿಕ್ಯೂಟಿವ್‌ಗಳು ಸಾಥ್ ನೀಡುತ್ತಾರೆ. ಸದಸ್ಯರು ಪಡೆದ ಸಕಾಲದಲ್ಲಿ ಮರುಪಾವತಿ ಮಾಡಿದಾಗಲೇ ಸಹಕಾರಿ ಅಭಿವೃದ್ಧಿ ಸಾಧ್ಯ ಎಂದರು. ಎಲ್ಲ ಸದಸ್ಯರ ಸಲಹೆ ಸೂಚನೆ ಸಹಕಾರ, ವಿವಿಧ ವಿಭಾಗಗಳಲ್ಲಿ ಅನುಭವವಿರುವ, ತೀಕ್ಷ್ಣ ಬುದ್ಧಿಯುಳ್ಳ ಪ್ರಧಾನ ಕಛೇರಿ ಅಧಿಕಾರಿಗಳು, ಜವಾಬ್ದಾರಿ ಅಚ್ಚುಕಟ್ಟಾಗಿ ನಿರ್ವಹಿಸುವ ದಕ್ಷ ಸಿಬ್ಬಂದಿಗಳು, ಫೀಲ್ಡ್ ಎಕ್ಸಿಕ್ಯೂಟಿವ್ಸ್ ಇವರೆಲ್ಲರಿಂದಾಗಿ ಸಹಕಾರಿ ಅತಿ ಕಡಿಮೆ ಅವಧಿಯಲ್ಲಿಯೇ ಈ ಮಟ್ಟಕ್ಕೆ ಬೆಳೆದು ನಿಂತಿದೆ ಎಂದರು. 2011ರಲ್ಲಿ ಆರಂಭವಾದ ಸಹಕಾರಿ ವರದಿ ಸಾಲಿನಲ್ಲಿ ಅಳ್ಳಂಕಿ, ಅಂಕೋಲಾ, ಸಿದ್ದಾಪುರದಲ್ಲಿ ಮೂರು ಶಾಖೆಗಳನ್ನು ತೆರೆಯುವದರ ಮೂಲಕ ಜಿಲ್ಲಾದ್ಯಂತ ಹತ್ತು ಶಾಖೆಗಳನ್ನು ಹೊಂದಿದ್ದು, ಎಂಟು ಆರ್ಥಿಕ ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆಯೆಂದು ತಿಳಿಸಿದರು.

ವರ್ಷಾಂತ್ಯಕ್ಕೆ ಒಟ್ಟೂ 23,306 ಸದಸ್ಯರು, ರೂ1.76ಕೋಟಿ ಶೇರು ಬಂಡವಾಳ, ರೂ33.92ಕೋಟಿ ಠೇವಣಿ ಹೊಂದಿದ್ದು, ರೂ34.31ಕೋಟಿ ಸದಸ್ಯರ ಸಾಲ ಇರುತ್ತದೆ. ರೂ23.43ಕೋಟಿ ಸ್ವ–ಸಹಾಯ ಸಂಘಗಳಿಗೆ ಸಾಲ ನೀಡಿದ್ದು, ದುಡಿಯುವ ಬಂಡವಾಳ ರೂ41.03ಕೋಟಿಯಷ್ಟು ಆಗಿದ್ದು, 2018–19ನೇ ಸಾಲಿನಲ್ಲಿ ರೂ68.23ಕೋಟಿಯಷ್ಟು ವ್ಯವಹಾರ ಮಾಡಿದೆಯೆಂದು ತಿಳಿಸಿದರು. ಸಹಕಾರಿಯು ಆರಂಭದಿಂದಲೂ ಸಂಪೂರ್ಣ ಗಣಕೀಕೃತವಾಗಿದ್ದು, ತನ್ನ ಸದಸ್ಯರಿಗೆ ಎಸ್.ಎಮ್.ಎಸ್. ಅಲರ್ಟ ಹಾಗೂ ಪಾಸ್‌ಬುಕ್ ಪ್ರಿಂಟಿಂಗ್ ಸೌಲಭ್ಯವನ್ನು ಒದಗಿಸಿದೆಯೆಂದು ತಿಳಿಸಿದರು. ಸಹಕಾರಿಯ ಕಾರ್ಯವ್ಯಾಪ್ತಿ ರಾಜ್ಯಮಟ್ಟಕ್ಕೆ ವಿಸ್ತರಣೆಗೊಂಡಿದ್ದು ಅತಿ ಶೀಘ್ರದಲ್ಲಿ ಮೂರರಿಂದ ಐದು ಶಾಖೆ ತೆರೆಯುವ ಬಗ್ಗೆ ತಿಳಿಸಿದರು.

ಜನರಲ್ ಮೆನೇಜರ್ ಮಹೇಶ ಎಸ್. ಶೆಟ್ಟಿ ಹಿಂದಿನ ಸಾಲಿನ ವರದಿ ವಾಚಿಸಿದರು. ಸಹಕಾರಿಯ ನಿರ್ದೇಶಕಿ ಗುಣಮಾಲ ಇಂದ್ರ ಸ್ವಾಗತಿಸಿದರು. ಉಪಾಧ್ಯಕ್ಷ ವಿ. ಎಸ್. ಕಿಮಾನಿಕರ ಪ್ರಾಸ್ತಾವಿಕ ನುಡಿದರು. ಕೆಲವು ನಿರ್ದೇಶಕರು ಹಾಗೂ ಸದಸ್ಯರುಗಳು ಅತ್ಯಮೂಲ್ಯ ಸಲಹೆ ನೀಡಿದರು. ವರದಿ ಸಾಲಿನಲ್ಲಿ ಸಾಧನೆ ಮಾಡಿದ ಸಿಬ್ಬಂದಿ, ಫೀಲ್ಡ್ ಎಕ್ಸಿಕ್ಯೂಟಿವ್, ನಿರ್ದೇಶಕರು ಹಾಗೂ ಬಿಡಿಸಿ ನಿರ್ದೇಶಕರುಗಳಿಗೆ ನೆನಪಿನ ಕಾಣಿಕೆ ನೀಡಿ ಸತ್ಕರಿಸುವ ಕಾರ್ಯಕ್ರಮವನ್ನು ಎಜಿಎಂ ಎಡ್ವಿನ್ ರೆಬೆಲ್ಲೋ ನಡೆಸಿಕೊಟ್ಟರು. ಇದೇ ಸಂದರ್ಭದಲ್ಲಿ ಸಹಕಾರಿಯ ಅತಿ ನಿರೀಕ್ಷಿತವಾದ ಅಧಿಕೃತ ವೆಬ್‌ಸೈಟ್ www.safestarsouharda.com ಅನಾವರಣಗೊಳಿಸಲಾಯಿತು. ನಿರ್ದೇಶಕ ಜಿ. ಆರ್. ಹೆಗಡೆ ವಂದನಾರ್ಪಣೆ ಮಾಡಿದರು. ಹೊನ್ನಾವರ ಶಾಖಾ ಮೆನೇಜರ್ ಕೇಶವ ತಾಂಡೇಲ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಆಂತರಿಕ ಲೆಕ್ಕಪರಿಶೋಧಕರಾದ ಎಸ್. ಎನ್. ಭಟ್ಟ, ಎಸ್. ಕೆ. ಭಟ್ಟ, ಚೀಫ್ ಮೆನೇಜರ್ ವಸಂತ ನಾಯ್ಕ, ಡೆವಲಪ್‌ಮೆಂಟ್ ಆಫೀಸರ್ ಶ್ರೀಪಾದ ಭಟ್ಟ, ತಾಂತ್ರಿಕ ವಿಭಾಗದ ಮೆನೇಜರ್ ವಿಘ್ನೇಶ್ವರ ಹೆಗಡೆ, ಅನೇಕ ಸದಸ್ಯರುಗಳು, ಆಡಳಿತ ಮಂಡಳಿ ನಿರ್ದೇಶಕರು, ಬಿಡಿಸಿ ನಿರ್ದೇಶಕರು, ಸಿಬ್ಬಂದಿಗಳು, ಫೀಲ್ಡ್ ಎಕ್ಸಿಕ್ಯೂಟಿವ್‌ಗಳು ಹಾಜರಿದ್ದರು.

ಸಹಿ/–
ಅಧ್ಯಕ್ಷರು

***Head Office***
2nd Floor, Mahale Complex, N.H. 17, HONAVAR, Uttara Kannada, KARNATAKA, Pin 581334
Phone: 08387 – 220015, 221525, 222125, Fax: 08387 – 222535
e-mail: safesouhohnr@gmail.com / safesssnhonnavar@souharda.coop

By ‘e’mail